**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 04.11.2025**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

1. ನಮ್ಮ ಸ್ವಂತ ಊರು ಕಲಿಯೂರು, ಟಿ ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ. 2019 ರಲ್ಲಿ ಆ ಮೋಟಾರ್ ಸೈಕಲನ್ನು ಷೋ ರೂಂನಿಂದ ಹೊಸದಾಗಿ ನಾನು ಖರೀದಿ ಮಾಡಿದೆನು. ಮೋಟಾರ್ ಸೈಕಲನ್ನು ಖರೀದಿಸಿರುವ ಎನ್ವಾಯ್ಸ್ ನನ್ನು ನ್ಯಾಯಾಲಯಕ್ಕೆ ನೀಡಿಲ್ಲ. ನಾನು ಖರೀದಿಸಿದಾಗ ರೂ.1,20,000/- ಬೆಲೆ ಇತ್ತು ಅದರಲ್ಲಿ ಸಾಲದ ಹಣ, ವಿಮೆಯ ಪ್ರಿಮಿಯಂ ಒಳಗೊಂಡಿತ್ತು ಎಂದು ಹೇಳುತ್ತಾರೆ. ಮೋಟಾರ್ ಸೈಕಲನ್ನು ಖರೀದಿಸಿರುವ ಇನ್ವಾಯ್ಸ್ ನ್ನು ನ್ಯಾಯಾಲಯಕ್ಕೆ ಕೊಡುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಆ ವಾಹನದ ಆರ್ ಸಿ ಮತ್ತು ನಿಮ್ಮ ಡಿಎಲ್ ನ್ನು ನ್ಯಾಯಾಲಯಕ್ಕೆ ಕೊಡುತ್ತೀರಾ ಎಂದರೆ ಸಾಕ್ಷಿ ಕೊಡುತ್ತೇನೆಂದು ಹೇಳುತ್ತಾರೆ.

2. ಅಪಘಾತವಾದ ಎರಡು ದಿನದ ನಂತರ ಪೊಲೀಸರಿಗೆ ದೂರನ್ನು ನಾನೇ ಕೊಟ್ಟೆನು. ನನ್ನ ದ್ವಿಚಕ್ರ ವಾಹನಕ್ಕೆ ಚೋಲಮಂಡಲಮ್ ವಿಮೆ ಕಂಪನಿಯಿಂದ ವಿಮೆ ತೆಗೆದುಕೊಂಡಿದ್ದೆನು. ನಿಮ್ಮ ವಾಹನ ಜಖಂ ಆಗಿದ್ದಕ್ಕೆ ವಿಮೆ ಕಂಪನಿಯಿಂದ ಎಷ್ಟು ಹಣ ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿ ರೂ.16,500/- ಬಂದಿದೆ ಎಂದು ಹೇಳುತ್ತಾರೆ. ಚೋಲಮಂಡಲಮ್ ವಿಮೆ ಕಂಪನಿಯವರನ್ನು ಎದುರುದಾರರನ್ನಾಗಿ ಮಾಡಿ ಅವರಿಂದ ರೂ.16,500/- ಪಡೆದುಕೊಂಡಿರುವುದಾಗಿ ಅರ್ಜಿಯಲ್ಲಿ ಹೇಳಲು

ತೊಂದರೆ ಇತ್ತಾ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ ಎಂದು ಹೇಳುತ್ತಾರೆ. ನಿಮ್ಮ ವಾಹನ ಜಖಂ ಆಗಿದ್ದ ಬಗ್ಗೆ ಅಧಿಕೃತ ಮೌಲ್ಯಧಾರರಿಂದ ಮೌಲ್ಯ ನಿರ್ಧರಣೆ ಮಾಡಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸರಿ. ನಿಮ್ಮ ಅರ್ಜಿಯ ಕ್ರಮ ಸಂಃ 21 ಎ ರಿಂದ ಡಿ ಯಲ್ಲಿ ಹೇಳಿರುವಷ್ಟು ಪರಿಹಾರ ಪಡೆದುಕೊಳ್ಳಲು ಅರ್ಹರಲ್ಲ ಎಂದರೆ ಸರಿಯಲ್ಲ. ಜಖಂ ಆಗಿದ್ದ ಮೋಟಾರ್ ಸೈಕಲ್ ನ ಪೋಟೋ ಹಾಜರು ಪಡಿಸಿಲ್ಲ ಎಂದರೆ ಸರಿ. ರಿಪೇರಿ ಆದ ಮೋಟಾರ್ ಸೈಕಲ್ ನ ಪೋಟೋವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ನೀವು ಪೋಟೋಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿದರೆ ವಾಸ್ತವ ಸ್ದಿತಿ ಗೊತ್ತಾಗುತ್ತದೆ ಎಂದು ಉದ್ದೇಶಪೂರ್ವಕವಾಗಿ ಜಖಂ ಆದ ಪೋಟೋ ಹಾಗೂ ರಿಪೇರಿಯಾದ ನಂತರದ ಮೋಟಾರ್ ಸೈಕಲ್ ನ ಪೋಟೋ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಮೋಟಾರ್ ಸೈಕಲ್ ನ ಮೌಲ್ಯ ಕಡಿಮೆಯಾಗಿ ಅದರ ಒಟ್ಟು ಮೌಲ್ಯದ ಶೇ 50 ಆ ದಿನಕ್ಕೆ ಬೆಲೆ ಇರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ವಾಹನಕ್ಕೆ ಜಖಂ ಆದ ಬಗ್ಗೆ ಐ ಎಂ ವಿ ವರದಿಯಲ್ಲಿ ನಮೂದು ಮಾಡಿರುವುದು ಅಧಿಕೃತ ದಾಖಲೆ ಎಂದರೆ ಸರಿ. ಸಾಕ್ಷಿ ಐ ಎಂ ವಿ ನೀರೀಕ್ಷಕರು ಬಂದು ಪರೀಕ್ಷೆ ಮಾಡಿ ವರದಿ ನೀಡಿದ್ದಾರೆಂದು ಹೇಳುತ್ತಾರೆ. ನಿಮ್ಮ ಮೋಟಾರ್ ಸೈಕಲ್ ಗೆ ಸೈಡ್ ಇಂಡಿಕೇಟರ್, ಸೈಡ್ ಮಿರರ್ ಹಾಗೂ ಕ್ರ್ಯಾಶ್ ಗಾರ್ಡ್ ಬಿಟ್ಟರೆ ಬೇರೆಲ್ಲೂ ಜಖಂ ಆಗಿರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ವಾಹನದ ವಿಮಾ ಕಂಪನಿಯವರು ಈಗಾಗಲೇ ವಾಹನ ಜಖಂ ಆಗಿದ್ದ

*ಬಗ್ಗೆ ಸಮರ್ಪಕವಾಗಿ ಪರಮರ್ಶಿಸಿ ಪರಿಹಾರ ನೀಡಿರುವುದರಿಂದ ನೀವು ಸಲ್ಲಿಸಿದ ಅರ್ಜಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ನಿಪಿ.5 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಸಿಗಲಿ ಎಂದು ಸುಳ್ಳು ಕ್ಲೇಂ ಅರ್ಜಿ ಸಲ್ಲಿಸಿರುತ್ತೀರಾ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***